1885ನೇ ಇಸವಿ ಅರ್ಜೀ ನಂಬರ್ 660.

ಮೃತಪಟ್ಟ ಲಕ್ಷ್ಮಣಸಿಂಗರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಹರೀಸಿಂಗ್ ಮೃತಪಟ್ಟ ಸದರೀ ಲಕ್ಷ್ಮಣಸಿಂಗರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜಿನಗೂಡು ತಾಲ್ಲೂಕು ತಾಯೂರು ಜೋಬಳಿ ಕುಪ್ಪನಹಳ್ಳಿ, ಸ್ಥಳದ ಸದರೀ ಹರೀಸಿಂಗರು ಸದರೀ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣಸಿಂಗರ ಜೆಂದಗಿ ಬಗ್ಯಾಗಿ ಬರತಕ್ಕ 90 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರೀಸಿಂಗರ ಅರ್ಜೀಯನ್ನು 1885ನೇಇಸವಿ ಡಿಸಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಣಸಿಂಗರ ಆಸ್ತಿಗೆ ಹಕ್ಕುದಾರರಾದ ವಿರುದ್ಧರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಛೆ.

1885ನೇ ಇಸವಿ ಡಿಸಂಬರ್ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿನಿ ನಮ್ಮ ದಸ್ತಖತ್ತೊಡನೆ ಕೊಜೋಣಾಗಿದೆ.

ವಿ. ಎ. ನರಸಿಮ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಅಡಿಷನಲ್ ಮುನಸಿಫ್ ಕೋರ್ಟಿನಲ್ಲಿ.

1885ನೇ ಇಸವಿ ಸಿವಿಲ್ ವ್ಯಾಜ್ಯದ ನಂ. 449.

ವಾದೀರು—ಮೈಸೂರು ಮಂಡಿಮೊಹಲ್ಲೆಯಲ್ಲಿರು ಮುಸಲ್ಮಾನರ ಜಾತಿ ವ್ಯಾಪಾರದ ಕಸಬುದಾರ್ರು 1ನೇ ಯಾಕೂಬ್‌ಸಾಬ 2ನೇ ಮಹಮ್ಮದ್ ನಬೀಸಾಬ್ 3ನೇ ಸೈಯದ್ ಮುರಾದ್ ಸಾಬ್.

ಪ್ರತಿವಾದಿ—ಸದರೀ ಮಂಡಿ ಮೊಹಲ್ಲೇಯಲ್ಲಿರುವ ಮುಸಲ್ಮಾನರಜಾತಿ ಷಹಅಲ್ಲಿಅಬ್ಬಾಸ್ ಸಾಹೇಬರವಮಗ ಸೈಯದ್ ಖಾದರ್‌ಳಾಭಳ್ಳ

ಮೇಲ್ಕಂಡ ವಾದಿರು ಪ್ರತಿವಾದೀರಿಂದ ಮೈಸೂರು ಮಂಡಿ ಮೊಹಲೇಯಲ್ಲಿರುವ ಒಂದು ಆಫೂರ್‌ಖಾನೆಯನ್ನು ಬರವಾಡಿಸಿ ಕೊಡಲು ಈ ಕೋರ್ಟು ಜಾಲತಿ ಇಸವಿ ಜೂಲೈತಿ ಮೇಲ್ಕಂಡ ನಂಬರಿನಲ್ಲಿ ಒಂದು ವ್ಯಾಜ್ಯವನ್ನು ದಾಖಲ್ಮಾಡುತ್ತಾರೆ ಸದರೀ ಆಫೂರು ಖಾನೆಗೆ ಮೈಸೂರು ಮಂಡಿ ಮೊಹಲಾದಲ್ಲಿರುವ ಮುಸಲಮಾನರ ಕೋಮಿನ ಜನರೆಲ್ಲತ್ತು ಹಕ್ಕುದಾರ್ರಾಗಿರುವರೆಂತಲೂ ಮತ್ತು ಮೇಲ್ಕಂಡ ವಾದಿ ಯಾಕೂಬ್‌ಸಾಬ್ ವಗೈರೇರು ತಮಿಗೋಸ್ಕರಲು ಮತ್ತು ಇತರ ಆ ಮೊಹಲ್ಲಾದ ಮುಸಲ್ಮಾನ ಕೋಮಿನವರಿಗೋಸ್ಕರಲು ವ್ಯವಹಾರ ನಡಿಸಲು ಅಪ್ಪಣೆ ಕೊಡಿಸಬೇಕೆಂದು ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಪ್ರಕರಣ ಪ್ರಕಾರ ಈ ಕೋರ್ಟಿಗೆ ಮನವಿ ಮಾಡಿಕೊಂಡಿರುತ್ತಾರೆ. ಆದಕಾರಣ ಮೇಲ್ಕಂಡ ವ್ಯಾಜ್ಯವು ಕೋರ್ಟಿಗೆ ದಾಖಲಾಗಿರುವ ಸಂಗತಿಯನ್ನು ಈ ಮೂಲಕ ಸಮಸ್ತರಿಗೂ ತಿಳಿಸುತ್ತೆ ಮತ್ತು ಈ ವ್ಯಾಜ್ಯವು ಈ ಮಾಹೆ ತಾರೀಖು 18ನೇ ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ತನಿಖೆ ಬಗ್ಯೆ ಬರುವದು.

ಪಿಡ್ಯೂಲ್.

ಮೈಸೂರು ಮಂಡಿಮೊಹಲಾ ನಕ್ಷೆಬಂದ ಬೀದಿಯಲ್ಲಿ ಪೂರ್ವಕ್ಕೆ ಜನಗಳು ತಿರುಗಾಡುವ ಗಲ್ಲಿ ಪಶ್ಚಿಮಕ್ಕೆ ಹಕ್ತಂ ಮದಾರಸಾಬಿ ಮನೆ, ದಕ್ಷಿಣಕ್ಕೆ ಈ ಷೂರ್‌ಖಾನೆಗೆ ಸೇರಿದ ಅಡಿಗೆ ಮನೆ, ಉತ್ತರಕ್ಕೆ ಜೈರೋಡು. ಈ ಮಧ್ಯೆ ಇರುವ ಕಟ್ಟಡ ಅಂಕಣ 2, ಖಾಲಿಜಾಗಾ ಅಂಕಣ 2 ವುಳ್ಳ ಆಫೂರ್‌ಖಾನಾ, ಅಂದಾಜು 50 ರೂಪಾಯಿ.

ಸಿ. ಆರ್. ಸುಬ್ಬರಾಯರ್,
ಮುನಸಿಫ್.

ನಗರ ಡಿವೀಜ್ಯ.

ನಗರ್ ಡಿವೀಜ್ಯ ಡಿಸ್ಟ್ರಿಕ್ಟ್‌ಜಡ್ಜ್‌ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 109.

ಮೃತಪಟ್ಟ ಲಕ್ಷ್ಮೀ ರಮಣಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚನ್ನಗಿರಿ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ನಿಟ್ಟೂರು ವೆಂಕಟರಾಯ ಮೃತಪಟ್ಟ ಸದರೀ ಲಕ್ಷ್ಮೀ ರಮಣಯ್ಯನಿಗೆ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಗಿರಿ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ನಿಟ್ಟೂರು ವೆಂಕಟರಾಯನು

ಚೆನ್ನಗಿರಿ ವಾಸಸ್ಥನಾಗಿ ಮೃತಪಟ್ಟ ಲಕ್ಷ್ಮೀ ರಮಣಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಿಟ್ಟೂರು ವೆಂಕಟರಾಯನ ಅರ್ಜೀಯನ್ನು 1885ನೇ ಇಸವಿ ಡಿಸಂಬರ್ ತಿಂಗಳು ತಾರೀಖು 22ರ ಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀ ರಮಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಮಿಸಲೇನಿಯಸ್ ನಂಬರ್ 552.

ಮೃತಪಟ್ಟ ರಾಮಗಿರಿ ಭೋಗಕಟ್ಟೆ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಕ್ಯಾಕಾನಪಳ್ಳಿ ತಾಲ್ಲೂಕು ಹಲನೂರು ಕಸಬೇಯಲ್ಲಿ ಯಿರುವ ಬದ್ದನಂಜಕಟ್ಟೆಯು, ಮೃತಪಟ್ಟ ಸದರೀ ರಾಮಗಿರಿ ಭೋಗಕಟ್ಟೆಯು ತನಿಗೆ ತಂದೆ ಆಗಬೇಕೆಂಬಿ, ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ರಾಮಗಿರಿ ಭೋಗಕಟ್ಟೆಯ ಜಿಂದಗಿ ಬಿದ್ದಾಗಿ ಬರತಕ್ಕ 900 ರೂಪಾಯಿ ಲೇಣಿಯನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತನ್ನು 1885ನೇ ಇಸವಿ ಡಿಸಂಬರ್ 18ನೇ ತಾರೀಖಿನಲ್ಲಿ ಕೆಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಗಿರಿ ಭೋಗಕಟ್ಟೆ ಆಸ್ತಿಗೆ ಹಕ್ಕುದಾರ್ರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಯಿರಬೇಕೆಂದು ಯಿದರಿಂದ ತಿಳಿಯಪಡಿಸಿಧೆ.

ತಾರೀಖು 5ನೇ ಮಾಪೆ ಡಿಸಂಬರ್ 1885ನೇ ಇಸವಿ.

ಸಿ. ಕೈಸ್,
ಸೆಬ್ ಜಡ್ಜ.

ಕಳವಾದ

ಪೂರಾ ಕರ್ಟಿಸೀ ನೋಟ್.

ನಂಬರ್.	ಸರ್ಕಲ್	ಕ್ರಯ	
B. 45—42407	ಮದ್ರಾಸ್	ರೂ. 1,000	ಹಕ್ಕುದಾರ್—ಮೈಸೂರು ಡಿಸ್ಟ್ರಿಕ್ಟು ತಿರಮಕೂಡ್ಲು ನರೋಪುರದ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ವೆಂಕೋಬ ರಾವ್—ಪತ್ತೇಮಾಡಿ ಕೊಟ್ಟವರಿಗೆ 50 ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾರೆ.

ಗೈರ್ ವಿಲಾ

ಆದೆ ಬಲಭಾಗದ ಅರ್ಧ ತುಕಡಿ ಕರ್ಟಿಸೀ ನೋಟ್.

ನಂಬರ್.	ಸರ್ಕಲ್.	ಕ್ರಯ.	
B. 80—05959.	ಮದ್ರಾಸ್	ರೂ. 10	ಹಕ್ಕುದಾರ—ಮೈಸೂರು ಫಳೇ ಅ ಗ್ರಹಾರದಲ್ಲಿರುವ ಅಬ್ಕಾರಿ ಗುಮಾಸ್ತೇ ಸುಬ್ಬರಾವ್.

ಪತ್ತೇಮಾಡಿ ಕೊಟ್ಟವರಿಗೆ ಎಂದು ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾನೆ.

Mysore Government Press, Bangalore.—1885.